ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ರವರ ಕಚೇರಿ

ಕರ್ನಾಟಕ ಸರ್ಕಾರ

ನಂ.14/3ಎ,
ರಾಷ್ಟ್ರೋತ್ಥಾನ ಪರಿಷತ್ ಕಟ್ಟಡ
3ನೇ ಮಹಡಿ, ನೃಪತುಂಗ ರಸ್ತೆ,
ಬೆಂಗಳೂರು – 560 001
ದೂರವಾಣಿ : 080-22271628
ಫ್ಯಾಕ್ಸ್ : 080-22226082

ಸಂಖ್ಯೆ: ಕೈಜಇ/ಜಂ.ರಿ/ಜತ/ಸನೂಗಿ/ಪ್ರಸ್ತಾವನೆ/173/2009-10(ಭಾಗ-2) ದಿ: 27.02.2016.

**ಆದೇಶ**

ವಿಷಯ:- ರಾಜ್ಯದ 9 ಸಹಕಾರಿ ನೂಲಿನ ಗಿರಣಿಗಳಿಗೆ ನೀಡಲಾದ ಸರ್ಕಾರಿ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸುವ ಹಾಗೂ ಅದರ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವ ಆದೇಶಕ್ಕೆ ಸಂಬಂಧಿಸಿದಂತೆ ವರದಿ ನೀಡುವ ಕುರಿತು.

ಉಲ್ಲೇಖ:- 1) ಸರ್ಕಾರಿ ಆದೇಶ ಸಂಖ್ಯೆ ವಾಕೈ 77 ಜಕೈಯೋ 2015 ಬೆಂಗಳೂರು ದಿನಾಂಕ 02-02-2016 ಮತ್ತು ದಿನಾಂಕ: 03.02.2016 (ಪ್ರತಿ ಲಗತ್ತಿಸಿದೆ).
2) ದಿನಾಂಕ 16.02.2016 ರಂದು ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶದ ಕುರಿತು ನಡೆದ ಸಭೆಯ ನಡವಳಿಗಳು ಮತ್ತು ಪರಿಶೀಲನಾ ಪಟ್ಟಿ (Check List) (ಪ್ರತಿ ಲಗತ್ತಿಸಿದೆ)

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರವು 2015-16ನೇ ಸಾಲಿನಲ್ಲಿ ಆಯವ್ಯಯದಲ್ಲಿ 9 ಸಹಕಾರಿ ನೂಲಿನ ಗಿರಣಿಗಳಿಗೆ ಅವಕಾಶವನ್ನು ಕಲ್ಪಿಸಿ, ಸರ್ಕಾರದಿಂದ ಪಡೆದಿರುವ ಸಾಲಗಳನ್ನು ಷೇರನ್ನಾಗಿ ಪರಿವರ್ತಿಸುವ, ಬಡ್ಡಿ ಹಾಗೂ ದಂಡದ ಬಡ್ಡಿಯನ್ನು ಮನ್ನಾ ಮಾಡುವ ಪ್ರಸ್ತಾವನೆಗೆ ಅಂಕಿ ಅಂಶಗಳನ್ನು ಸಲ್ಲಿಸುವಾಗ ಸಮಯ ನಿರ್ಬಂಧವಿದ್ದುದರಿಂದ ಗಿರಣಿಗಳಿಂದ ಸ್ವೀಕೃತವಾದ ಮನವಿಯ ಅಂಕಿ ಅಂಶಗಳನ್ನು ಈ ಕಛೇರಿಯ ದಾಖಲೆಗಳೊಂದಿಗೆ ಹೋಲಿಸಿ/ತಾಳೆಮಾಡಿ ವ್ಯತ್ಯಾಸಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದನ್ನು ಸರ್ಕಾರವು ಅನುಮೋದಿಸಿ ಉಲ್ಲೇಖ (1)ರ ಮೂಲಕ ಆದೇಶವನ್ನು ಹೊರಡಿಸಿರುತ್ತದೆ.

ಉಲ್ಲೇಖ (2)ರ ಮೂಲಕ, ಸರ್ಕಾರದ ಆದೇಶದ ಕುರಿತು ಸಂಬಂಧಿತ ಸರ್ಕಾರದ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ, ಅಧಿಕಾರಿಗಳ ತಂಡವನ್ನು ರಚಿಸುವ ಕುರಿತು ಚರ್ಚಿಸಿ ನಿರ್ಣಯಿಸಲಾಗಿರುತ್ತದೆ. ಗಿರಣಿಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಿರುವ ಅಂಕಿ ಅಂಶಗಳನ್ನು ಪರಿಶೀಲಿಸಿ, ದೃಢೀಕರಿಸಿ 10 ದಿನದೊಳಗೆ ಸಲ್ಲಿಸುವಂತೆ ತಿಳಿಸಿ ಈ ಕೆಳಕಂಡಂತೆ ತಂಡವನ್ನು ರಚಿಸಲಾಗಿದೆ.

| ಕ್ರಂ. ಸಂ. | ಸಹಕಾರಿ ನೂಲಿನ ಗಿರಣಿಗಳು | ಸಂಭವನೀಯ ಕ್ಷೇತ್ರಿಯ ಅಧಿಕಾರಿಗಳ ತಂಡದ ವಿವರ |
|---|---|---|
| 1 | 1.) ದಿ ಬೆಳಗಾಂ ಕೋ-ಆಪ್ ಕಾಟನ್ ಸ್ಪಿನ್ನಿಂಗ್ ಮಿಲ್ ಲಿ., ಪಂತಬಾಳೇಕುಂದ್ರಿ-591103, ತಾಲ್ಲೂಕು: ಬೆಳಗಾವಿ, ಜಿಲ್ಲೆ: ಬೆಳಗಾವಿ,<br><br>2) ಮಲಪ್ರಭಾ ಸಹಕಾರಿ ನೂಲಿನ ಗಿರಣಿ ನಿ., ಸವದತ್ತಿ-591126 ತಾಲೂಕು: ಬೆಳಗಾವಿ ಜಿ. ಬೆಳಗಾವಿ | 1. ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಗದಗ್ ಜಿಲ್ಲೆ, ಗದಗ್ ರವರ ನೇತೃತ್ವದೊಂದಿಗೆ.<br><br>2. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಕೆ.ಎಚ್.ಟಿ.ಐ. ಕಟ್ಟಡ, ವೀರೇಶ್ವರ ಮಠದ ಹತ್ತಿರ, ನರಸಾಪೂರ, ಬೆಟಗೇರಿ, ಗದಗ-582102.<br><br>3. ಸಹಕಾರ ಸಂಘಗಳ ಉಪ ನಿಬಂಧಕರು, ಜಿಲ್ಲಾ ಆಡಳಿತ ಭವನ ಬಿಲ್ಡಿಂಗ್, ಕೊಠಡಿ ಸಂಖ್ಯೆ: 125, ಗದಗ್ ಜಿಲ್ಲೆ, ಗದಗ್. |

| ಕ್ರಂ. ಸಂ. | ಸಹಕಾರಿ ನೂಲಿನ ಗಿರಣಿಗಳು | ಸಂಭವನೀಯ ಕ್ಷೇತ್ರಿಯ ಅಧಿಕಾರಿಗಳ ತಂಡದ ವಿವರ |
|---|---|---|
| 2 | 1) ದಿ ಫಾರ್ಮರ್ಸ್ ಕೋ-ಆಪ್ ಸ್ಪಿನ್ನಿಂಗ್ ಮಿಲ್ಸ್ ಲಿ., ಹುಲಕೋಟಿ-582205, ಗದಗ್ ತಾಲ್ಲೂಕು ಮತ್ತು ಜಿಲ್ಲೆ.<br><br>2) ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ನಿ., ಲಕ್ಷ್ಮೇಶ್ವರ-582116, ತಾಲ್ಲೂಕು: ಲಕ್ಷ್ಮೇಶ್ವರ, ಜಿಲ್ಲೆ: ಗದಗ್. | 1. ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಬೆಳಗಾವಿ ಜಿಲ್ಲೆ, ಬೆಳಗಾವಿ ರವರ ನೇತೃತ್ವದೊಂದಿಗೆ.<br>2. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉದ್ಯಮ ಭಾಗ,ಬೆಳಗಾವಿ-590008.<br>3. ಸಹಕಾರ ಸಂಘಗಳ ಉಪ ನಿಬಂಧಕರು, ಸಹಕಾರ ಭವನ, ಕೆ.ಹೆಚ್.ಬಿ. ಎದುರು, ಜಕ್ಕೇರಿ ಹೊಂಡಾ, ರೈಲ್ವೆ ಸ್ಟೇಷನ್ ಹತ್ತಿರ, ಬೆಳಗಾವಿ-590 008. |
| 3 | 1) ತುಂಗಭದ್ರ ಫಾರ್ಮರ್ಸ್, ಕೋ-ಆಪ್ ಸ್ಪಿನ್ನಿಂಗ್ ಮಿಲ್ ಲಿ., ರಾಣೆಬೆನ್ನೂರು(ಕಮದೋಡ)-581115, ಜಿಲ್ಲೆ: ಹಾವೇರಿ.<br><br>2) ರೈತರ ಸಹಕಾರಿ ನೂಲಿನ ಗಿರಣಿ ನಿ., ಹನುಮನಮಟ್ಟಿ-581135, ತಾ: ರಾಣೆಬೆನ್ನೂರ್, ಜಿ: ಹಾವೇರಿ, | 1. ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಧಾರವಾಡ ಜಿಲ್ಲೆ, ಧಾರವಾಡ ರವರ ನೇತೃತ್ವದೊಂದಿಗೆ.<br>2. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ ಕಟ್ಟಡ, ಡಿ.ಸಿ.ಕಛೇರಿ ಆವರಣ, ಧಾರವಾಡ-580001.<br>3. ಸಹಕಾರ ಸಂಘಗಳ ಉಪ ನಿಬಂಧಕರು, ಎಂ.ಡಿ. ಪತ್ರಾವಳಿ ಬಿಲ್ಡಿಂಗ್, 7ನೇ ಅಡ್ಡರಸ್ತೆ, ಮಲಮಡ್ಡಿ, ರೈಲ್ವೆ ಸ್ಟೇಷನ್ ಹತ್ತಿರ, ಧಾರವಾಡ ಜಿಲ್ಲೆ, ಧಾರವಾಡ. |
| 4 | 1) ದಿ ಗದಗ್ ಕೋ-ಆಪ್ ಟೆಕ್ಸ್‌ಟೈಲ್ ಮಿಲ್ ಲಿ., ಹುಲಕೋಟಿ-582205, ಗದಗ್ ಜಿಲ್ಲೆ.<br><br>2) ಶ್ರೀ ವೆಂಕಟೇಶ ಕೋ-ಆಪ್ ಟೆಕ್ಸ್‌ಟೈಲ್ ಮಿಲ್ ಲಿ., ಗದಗ-ಹುಬ್ಬಳ್ಳಿ ರೋಡ್, ನವಲಗುಂದ ತಾಲ್ಲೂಕು, ಅಣ್ಣಿಗೇರಿ-582201, ಧಾರವಾಡ ಜಿಲ್ಲಾ. | 1. ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಹಾವೇರಿ ಜಿಲ್ಲೆ, ಹಾವೇರಿ ರವರ ನೇತೃತ್ವದೊಂದಿಗೆ.<br>2. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ರೂಮ್ ನಂ.43. ಮೂರನೇ ಮಹಡಿ,ಸಿ-ಬ್ಲಾಕ್, ಜಿಲ್ಲಾಡಳಿತ ಭವನ, ಡಿ.ಸಿ ಕಛೇರಿ, ದೇವಗಿರಿ ತಾ. ಹಾವೇರಿ-581110.<br>3. ಸಹಕಾರ ಸಂಘಗಳ ಉಪ ನಿಬಂಧಕರು, ಜಿಲ್ಲಾ ಆಡಳಿತ ಕಛೇರಿ ಕಟ್ಟಡ, ಕೊಠಡಿ ಸಂಖ್ಯೆ: 29, 3ನೇ ಮಹಡಿ, ದೇವಗಿರಿ ಹಾವೇರಿ ಜಿಲ್ಲೆ, ಹಾವೇರಿ. |
| 5 | ದಿ ಬನಹಟ್ಟಿ ಸಹಕಾರಿ ನೂಲಿನ ಗಿರಣಿ ನಿ., ಬನಹಟ್ಟಿ-587311, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 1. ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ರವರ ನೇತೃತ್ವದೊಂದಿಗೆ.<br>2. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೊಠಡಿ ಸಂಖ್ಯೆ:140/141 ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯತ್, ಬಾಗಲಕೋಟ-587101.<br>3. ಸಹಕಾರ ಸಂಘಗಳ ಉಪ ನಿಬಂಧಕರು, ಜಿಲ್ಲಾ ಆಡಳಿತ ಕಛೇರಿ ಕಟ್ಟಡ, ಕೊಠಡಿ ಸಂಖ್ಯೆ: 138, ನವನಗರ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. |

ಅದರಂತೆ ಈ ಮೇಲೆ ನೇಮಿಸಿರುವ ತಂಡಗಳು ಸಂಬಂಧಪಟ್ಟ ಗಿರಣಿಗಳಿಗೆ ಭೇಟಿ ನೀಡಿ ಇದರೊಂದಿಗೆ ಲಗತ್ತಿಸಿರುವ ಪರಿಶೀಲನಾ ಪಟ್ಟಿ (Check List) ನಲ್ಲಿ ಮಾಹಿತಿ ಪಡೆದು, ಗಿರಣಿಯ ಸರ್ಕಾರಿ ಸಾಲ, ಬಡ್ಡಿ ಮತ್ತು ದಂಡದ ಬಡ್ಡಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ, ಈ ಆದೇಶ ಸ್ವೀಕರಿಸಿದ 10 ದಿನಗಳ ಒಳಗೆ ವರದಿ ಸಲ್ಲಿಸುವುದು. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಳಗಾವಿ ಪ್ರಾಂತ/ಪಶ್ಚಿಮ ವಿಭಾಗ, ಬೆಳಗಾವಿ, ರವರನ್ನು ಈ ಪರಿಶೀಲನಾ ಕಾರ್ಯಕ್ಕೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಕಾರಣ ಎಲ್ಲಾ ತಂಡಗಳು ತಮ್ಮ ವರದಿಗಳನ್ನು ನೋಡಲ್ ಅಧಿಕಾರಿಯವರ ಮುಖಾಂತರ ದೃಢೀಕರಿಸಿ ಈ ಕಛೇರಿಗೆ ಸಲ್ಲಿಸತಕ್ಕದ್ದು ಎಂದು ಆದೇಶಿಸಲಾಗಿದೆ.

ತಮ್ಮ ವಿಶ್ವಾಸಿ,

ಲಗತ್ತು : ಮೇಲಿನಂತೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಮತ್ತು
ನಿರ್ದೇಶಕರು ಮತ್ತು ಸಹಕಾರ ಸಂಘಗಳ ಅಪರ ನಿಬಂಧಕರು
ಕೈಮಗ್ಗ ಮತ್ತು ಜವಳಿ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು-560001

ಪ್ರತಿಯನ್ನು ಮಾಹಿತಿಗಾಗಿ

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ವಿಕಾಸಸೌಧ, ಬೆಂಗಳೂರು ರವರಿಗೆ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರಿಗೆ.
4) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52, ರವರಿಗೆ.
5) ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಜಯನಿವಾಸ, ಶಂಕರಮಠ ರಸ್ತೆ, ಬೆಂಗಳೂರು ರವರಿಗೆ.
6) ನಿರ್ದೇಶಕರು, ಪಿಂಚಣಿ ಮತ್ತು ಸಣ್ಣ ಉಳಿತಾಯ ಹಾಗೂ ಆಸ್ತಿ ಋಣ ನಿರ್ವಹಣ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು ರವರಿಗೆ.
7) ಹಿರಿಯ ಲೆಕ್ಕಾಧಿಕಾರಿಗಳು, (ಸಾಲಗಳು) ಅಕೌಂಟೆಂಟ್ ಜನರಲ್ ಕಛೇರಿ, ಪಾರ್ಕ್ ಹೌಸ್ ರೋಡ್, ಬೆಂಗಳೂರು ರವರಿಗೆ.
8) ಜಂಟಿ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಬೆಳಗಾವಿ ಪ್ರಾಂತ, ಬೆಳಗಾವಿ ರವರಿಗೆ.
9) ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಳಗಾವಿ ಪ್ರಾಂತ/ಪಶ್ಚಿಮ ವಿಭಾಗ, ಬೆಳಗಾವಿ, ರವರಿಗೆ.
10) ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ 9 ಸಹಕಾರಿ ನೂಲಿನ ಗಿರಣಿಯವರಿಗೆ
11) ಸಂಬಂಧಿಸಿದ ತಂಡದ ಎಲ್ಲಾ ಅಧಿಕಾರಿಗಳಿಗೆ
12) ಉಪ ನಿರ್ದೇಶಕರು (ಕೈಮಗ್ಗ), ನೋಡಲ್ ಅಧಿಕಾರಿ, ಇ-ಗವರ್ನೆನ್ಸ್, ಯೋಜನೆಗಳ ಅನುಷ್ಠಾನ, ಗಣಕೀಕರಣ, ಹಾಗೂ ಅಂತರ್ಜಾಲ ಕೆಲಸಗಳ ನಿರ್ವಹಣೆಯ ವಿಭಾಗ, ಕೈಮಗ್ಗ ಮತ್ತು ಜವಳಿ ಇಲಾಕೆ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಅಂತರ್ಜಾಲದಲ್ಲಿ ಆದೇಶವನ್ನು ಅಳವಡಿಸುವ ಕ್ರಮಕ್ಕಾಗಿ.
13) ಕಛೇರಿ ಪ್ರತಿ.

27 FEB 2016

ರವಾನಿಸಿದೆ
33 BM
(4.55 PM)

ಕೈಜಇ/ಜಂರಿ/ಜತ/ಸನೂಗಿ/ಪ್ರಸ್ತಾವನೆ/173/2009-10(ಭಾಗ-2), ದಿ:27.02.2016 ( 9 Co-op.Spining Mills )

## ಚೆಕ್ ಲಿಸ್ಟ (Check List)

I) 2015-16ನೇ ಸಾಲಿನ ಆಯವ್ಯಯ ಘೋಷಿಸಿರುವಂತೆ 31.03.2015ರ ಅಂತ್ಯಕ್ಕೆ ಗಿರಣಿಯ ಸರ್ಕಾರಿ ಸುಸ್ತಿಯನ್ನು ಷೇರನ್ನಾಗಿ ಪರಿವರ್ತಿಸಿ ಬಡ್ಡಿಯನ್ನು ಮನ್ನಾ ಮಾಡಲು ಸಲ್ಲಿಸಲಾದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಮೊತ್ತಕ್ಕೂ ಗಿರಣಿಯಲ್ಲಿ ನಿರ್ವಹಿಸಲಾದ ಲೆಕ್ಕ ಪುಸ್ತಕಗಳಲ್ಲಿ ನಮೂದಿಸಲಾದ ಮೊತ್ತಕ್ಕೂ ಹೊಂದಾಣಿಕೆ ಮಾಡಿ ಸರಿಯಿದೆ ಎಂದು ಈ ಕೆಳಕಂಡಂತೆ ದೃಢೀಕರಿಸಲಾಗಿದೆ (ವ್ಯತ್ಯಾಸವಿದ್ದಲ್ಲಿ ಕಾರಣಗಳನ್ನು ವಿವರಿಸುವುದು)

| ಕ್ರಂ. ಸಂ. | ಮಂಜೂರಾತಿ/ಬಿಡುಗಡೆ ಆದೇಶದ ಸಂಖ್ಯೆ/ ದಿನಾಂಕ | ಪ್ರಸ್ತಾವನೆಯ ಪ್ರಕಾರ | | | | ಷರಾ/ ಅಭಿಪ್ರಾಯ |
|---|---|---|---|---|---|---|
| 1. | | ಸಾಲದ ಮೊತ್ತ | ಬಡ್ಡಿ ಮೊತ್ತ | ದಂಡದ ಬಡ್ಡಿ | ಒಟ್ಟು ಬಡ್ಡಿ | |
| | | | | | | |
| 2. | ಗಿರಣಿಯ ಲೆಕ್ಕ ಪುಸ್ತಕಗಳ ಪ್ರಕಾರ | | | | | ಷರಾ/ ಅಭಿಪ್ರಾಯ |
| | | ಸಾಲದ ಮೊತ್ತ | ಬಡ್ಡಿ ಮೊತ್ತ | ದಂಡದ ಬಡ್ಡಿ | ಒಟ್ಟು ಬಡ್ಡಿ | |
| | | | | | | |
| 3. | ವ್ಯತ್ಯಾಸದ ಪ್ರಕಾರ | | | | | ಷರಾ/ ಅಭಿಪ್ರಾಯ |
| | | ಸಾಲದ ಮೊತ್ತ | ಬಡ್ಡಿ ಮೊತ್ತ | ದಂಡದ ಬಡ್ಡಿ | ಒಟ್ಟು ಬಡ್ಡಿ | |

II. <u>2015-16ನೇ ಸಾಲಿನ ಆಡಿಟ್ ವರದಿಯ ಪ್ರಕಾರ :</u>

| ಕ್ರಂ. ಸಂ. | ಆಡಿಟ್ ವರದಿ | ಸಾಲ-ಬಡ್ಡಿ | ಸುಸ್ತಿ ಬಡ್ಡಿ | ಒಟ್ಟು ಬಡ್ಡಿ | ಷರಾ/ಅಭಿಪ್ರಾಯ |
|---|---|---|---|---|---|
| | | | | | |

ಹಿಂದಿನ ಸಾಲಿಗೂ ಮತ್ತು 2015-16ನೇ ಸಾಲಿನ ಆಡಿಟ್ ವರದಿಯ ಸರ್ಕಾರಿ ಸಾಲದ ಮೊತ್ತಕ್ಕೆ ಏನಾದರೂ ವ್ಯತ್ಯಾಸಗಳು ಕಂಡು ಬಂದಲ್ಲಿ ಸ್ಪಷ್ಟವಾದ ವಿವರಣೆ ಮತ್ತು ಪೂರಕ ದೃಢೀಕೃತ ದಾಖಲೆಗಳೊಂದಿಗೆ ಸಲ್ಲಿಸುವುದು.

III. <u>ಗಿರಣಿಯಲ್ಲಿ ಪರಿಶೀಲಿಸಲಾದ ದಾಖಲಾತಿಗಳು:</u>

1)

2)

3)

4)

# ಚೆಕ್ ಲಿಸ್ಟ (Check List)

IV. ದಾಖಲಾತಿಗಳ ನಿರ್ವಹಣೆಯಲ್ಲಿ ತಂಡದ ಅಭಿಪ್ರಾಯ:

1)

2)

3)

4)

V. ಸರ್ಕಾರವು ನೀಡಿರುವ ಸಾಲಗಳ ಕುರಿತು ಸರ್ಕಾರದ ಆದೇಶ/ಜವಳಿ ಅಭಿವೃದ್ಧಿ ಆಯುಕ್ತರ ಕಛೇರಿಯ ಆದೇಶಗಳಲ್ಲಿ ಹಾಕಿರುವ ಷರತ್ತುಗಳನ್ನು ಪೂರೈಸಲಾಗಿದೆಯೇ? ಪೂರೈಸಲಾಗಿರುವ ಬಗ್ಗೆ ತಂಡದ ಅಭಿಪ್ರಾಯ ಗಿರಣಿಯಿಂದ ಪಡೆಯಲಾದ ದಾಖಲಾತಿಗಳು:

1. ಗಿರಣಿಯ ಆಡಳಿತ ಮಂಡಳಿಯ ನಡವಳಿಕೆ ಪ್ರತಿ
2. ಸಂಘದಿಂದ ನೀಡಲಾದ ಮುಚ್ಚಳಿಕೆ ಪತ್ರ
3. ಬಾಂಡ್/ಅಫಿಡವಿಟ್
4. ಕ್ರಿಯಾ ಯೋಜನಾ ವರದಿ
5. ಇತರೆ ದಾಖಲಾತಿಗಳು

VI. ಗಿರಣಿಯು ಸಲ್ಲಿಸಿರುವ ಪ್ರಸ್ತಾವನೆ ಹಾಗೂ ದಾಖಲಾತಿಗಳ ಕುರಿತು ತಂಡದ ಅಭಿಪ್ರಾಯ

**ದಿನಾಂಕ: 16.02.2016 ರಂದು ಬೆಳಗ್ಗೆ 11.30 ಗಂಟೆಗೆ ಡಾ|| ಆರ್. ರಾಜು, ಭಾ.ಅ.ಸೇ., ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ 9 ಸಹಕಾರಿ ನೂಲಿನ ಗಿರಣಿಗಳಲ್ಲಿರುವ ಸಾಲವನ್ನು ಸರ್ಕಾರದ ಷೇರು ಬಂಡವಾಳವನ್ನಾಗಿ ಪರಿವರ್ತಿಸಿ ಬಡ್ಡಿಯನ್ನು ಮನ್ನಾ ಮಾಡಿ ಸರ್ಕಾರ ಹೊರಡಿಸಿರುವ ಆದೇಶದ ಬಗ್ಗೆ ಚರ್ಚಿಸಿದ ನಡವಳಿ**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ಈ ಕೆಳಕಂಡಂತಿವೆ:-

| ಕ್ರಂ. ಸಂ. | ಅಧಿಕಾರಿಗಳ ಹೆಸರು ಮತ್ತು ಹುದ್ದೆ |
|---|---|
| 01. | ಶ್ರೀ ಬಿ.ಎಸ್.ಹರೀಶ್<br>ಸಹಕಾರ ಸಂಘಗಳ ಅಪರ ನಿಬಂಧಕರು, ಸಹಕಾರ ಇಲಾಖೆ. |
| 02. | ಶ್ರೀ ವಿ.ಎಸ್.ಕಳಶೇಶ್ವರ,<br>ಹಿರಿಯ ಲೆಕ್ಕಾಧಿಕಾರಿ (ಸಾಲಗಳು) ಅಕೌಂಟೆಂಟ್ ಜನರಲ್ ಕಛೇರಿ. |
| 03. | ಶ್ರೀ ಝರಪ್ಪ.ಜಿ.ಮೊಳಕೇರಿ.<br>ಅಧಿಕ ನಿರ್ದೇಶಕರು (ಕೈ ಮತ್ತು ಜ) |
| 04. | ಶ್ರೀ ಜಬ್ಬಾರ್ ಬೇಗ್,<br>ಸಹಕಾರ ಸಂಘಗಳ ಜಂಟಿ ನಿಬಂಧಕರು (ಜವಳಿ) |
| 05. | ಶ್ರೀ ವಿಜಯಕುಮಾರ್.ಬಿ.ನಿರಾಳೆ,<br>ಜಂಟಿ ನಿರ್ದೇಶಕರು (ಕೈ ಮತ್ತು ಜ) |
| 06. | ಶ್ರೀಮತಿ ಹೆಚ್.ಆರ್.ಅರುಣ ಕುಮಾರಿ<br>ಉಪ ನಿರ್ದೇಶಕರು, ಸಹ ಸಂ.ಲೆಕ್ಕ ಪರಿಶೋಧನಾ ಇಲಾಖೆ, |
| 07. | ಶ್ರೀ ಗಂಗಯ್ಯ,<br>ಉಪ ನಿರ್ದೇಶಕರು ಹಾಗೂ ಲೆಕ್ಕಾಧಿಕಾರಿಗಳು (ಪ್ರ) (ಕೈ ಮತ್ತು ಜ) |
| 08. | ಶ್ರೀಮತಿ ಲೀನಾ ಸ್ಯಾಂಟೋ,<br>ಸಹಾಯಕ ಲೆಕ್ಕಾಧಿಕಾರಿ (ಸಾಲಗಳು) ಅಕೌಂಟೆಂಟ್ ಜನರಲ್ ಕಛೇರಿ. |
| 09. | ಶ್ರೀ ಗಣೇಶ್.ಆರ್,<br>ಸಹ.ಸಂ.ಸಹಾಯಕ ನಿಬಂಧಕರು (ಕೈ) ಕೇಂದ್ರ ಕಛೇರಿ. |
| 10. | ಶ್ರೀ ಸಂಗಮಾದ್.ಹೆಚ್.ಆರ್.,<br>ಉಪ ಪ್ರಧಾನ ವ್ಯವಸ್ಥಾಪಕರು, ಸಹ ಅಪೆಕ್ಸ್ ಬ್ಯಾಂಕ್ ನಿ., |
| | ಗೈರು ಹಾಜರು |
| 1. | ಶ್ರೀ ಓ. ಬೊಮ್ಮಣ್ಣ,<br>ನಿರ್ದೇಶಕರು, ಪಿಂಚಣಿ ಮತ್ತು ಸಣ್ಣ ಉಳಿತಾಯ, ಆಸ್ತಿ ಋಣ ನಿರ್ವಹಣಾ ಇಲಾಖೆ. |

ಸಭೆಯಲ್ಲಿ ಹಾಜರಾದ ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಎಲ್ಲಾ ಅಧಿಕಾರಿಗಳಿಗೆ ಶ್ರೀ ಜಬ್ಬಾರ್ ಬೇಗ್, ಸಹಕಾರ ಸಂಘಗಳ ಜಂಟಿ ನಿಬಂಧಕರು (ಜವಳಿ) ರವರು ಸ್ವಾಗತ ಕೋರಿದರು ಹಾಗೂ ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರಿಗೆ ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಲು ಕೋರಿದರು. ಇದರನ್ವಯ, ಈ ಸಭೆಯ ಉದ್ದೇಶವನ್ನು ವಿವರಿಸಿ ಸರ್ಕಾರದ ಆದೇಶದ ಕುರಿತು ಸಭೆಗೆ ಸಲಹೆಗಳನ್ನು ನೀಡಿ, ಮುಂದೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಅಭಿಪ್ರಾಯಗಳನ್ನು ಮಂಡಿಸುವಂತೆ ಅಧ್ಯಕ್ಷರು ಸೂಚಿಸಿದರು.

ಈ ಕೆಳಕಂಡ ಅಂಶಗಳನ್ನು ಕುರಿತು, ಸುದೀರ್ಘವಾಗಿ ಚರ್ಚಿಸಲಾಯಿತು.

1. ಶ್ರೀ ಜಬ್ಬಾರ್ ಬೇಗ್, ಸಹಕಾರ ಸಂಘಗಳ ಜಂಟಿ ನಿಬಂಧಕರು (ಜವಳಿ) ರವರು ಪ್ರಸ್ತಾವಿಕವಾಗಿ ಮಾತನಾಡಿ ಸರ್ಕಾರದ ಸದರಿ ಆದೇಶದಲ್ಲಿ ಮಹಾಲೇಖಪಾಲರ ಹಾಗೂ ಆಸ್ತಿ ಋಣ ನಿರ್ವಹಣ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಗಿರಣಿಗಳ ಖಾತೆ ಹೊಂದಾಣಿಕೆ ಮಾಡಿಕೊಂಡು ಮುಂದೆ ಗಿರಣಿಗಳನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಯತ್ತ ಸಾಗಿಸಲು ಬೇಕಾಗುವ ಕ್ರಿಯಾ ಯೋಜನೆಗಳನ್ನು ಅಳವಡಿಸಿಕೊಂಡು ಗಿರಣಿಗಳೊಂದಿಗೆ ಅವಶ್ಯ ಒಳಂಬಡಿಕೆಗಳನ್ನು ಮಾಡಿಕೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ಸೂಚಿಸಿರುತ್ತಾರೆ. ಕಾರಣ ಸಂಬಂಧಪಟ್ಟ ಜಿಲ್ಲೆಯ ಸಹಕಾರ, ಜವಳಿ ಹಾಗೂ ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಯ ಕ್ಷೇತ್ರಿಯ ಅಧಿಕಾರಿಗಳ ಮುಖಾಂತರ ಗಿರಣಿವಾರು ಪರಿಶೀಲನಾ ವರದಿಗಳನ್ನು ಪಡೆಯಬಹುದಾಗಿರುತ್ತದೆ. ಮಹಾಲೇಖಪಾಲರ ಹಾಗೂ ಆಸ್ತಿ ಋಣ ನಿರ್ವಹಣ ಇಲಾಖೆಗಳಲ್ಲಿ ಅಂಕಿ ಅಂಶಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ಯಾವ ದಾಖಲಾತಿಗಳು ಅವಶ್ಯವೆಂದು ತಿಳಿಸಿದ್ದಲ್ಲಿ ಪೂರೈಸಲಾಗುವುದು. ಈ ಕುರಿತು ಸದರಿ ಇಲಾಖೆಗಳ ಅಧಿಕಾರಿಗಳು ವಿವರಿಸಬೇಕು ಎಂದು ಕೋರಿದರು.

2. ಶ್ರೀ ವಿ.ಎಸ್.ಕಳಸೇಶ್ವರ, ಹಿರಿಯ ಲೆಕ್ಕಾಧಿಕಾರಿಗಳು, (ಸಾಲಗಳು) ಅಕೌಂಟೆಂಟ್ ಜನರಲ್ ಕಛೇರಿ ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಸರ್ಕಾರದ ಆದೇಶದಲ್ಲಿ ಎಲ್ಲಾ 9 ಸಹಕಾರಿ ನೂಲಿನ ಗಿರಣಿಗಳಿಗೆ ಸಂಬಂಧಿಸಿದ ಸರ್ಕಾರಿ ಸಾಲ, ಬಡ್ಡಿ ಮತ್ತು ದಂಡದ ಬಡ್ಡಿ ಲೆಕ್ಕ ಶೀರ್ಷಿಕೆ ನಮೂದಿಸಿರುವುದಿಲ್ಲ. ಅಲ್ಲದೆ, ಸರ್ಕಾರಿ ಸಾಲವನ್ನು ಷೇರನ್ನಾಗಿ ಪರಿವರ್ತಿಸಿದ ಮೇಲೆ ಯಾವ ಲೆಕ್ಕ ಶೀರ್ಷಿಕೆಗೆ ಸಾಲ ಹೊಂದಾಣಿಕೆ ಮಾಡಬೇಕು ಹಾಗೂ ಬಡ್ಡಿ ಮತ್ತು ದಂಡದ ಬಡ್ಡಿ ಮನ್ನಾ ಮಾಡಿದ್ದನ್ನು ಯಾವ ಲೆಕ್ಕ ಶೀರ್ಷಿಕೆಗೆ ಹೊಂದಾಣಿಕೆ ಮಾಡಬೇಕು ಎಂಬ ಕುರಿತು ಸ್ಪಷ್ಟ ನಿರ್ದೇಶನ ನೀಡಬೇಕಾಗಿರುತ್ತದೆ. ಆದ್ದರಿಂದ, ಇದನ್ನು ಸರ್ಕಾರದ ಗಮನಕ್ಕೆ ತಂದು, ಆರ್ಥಿಕ ಇಲಾಖೆಯಿಂದ ಖಾತೆ ಹೊಂದಾಣಿಕೆ ಮಾಡುವ ಕುರಿತ ಸೂಕ್ತ ಲೆಕ್ಕ ಶೀರ್ಷಿಕೆಗಳನ್ನು ಪಡೆದು, ಈಗ ನೀಡಿರುವ ಆದೇಶ ಪರಿಷ್ಕರಿಸಿ ನೀಡಿದಲ್ಲಿ ಅನುಕೂಲವಾಗುವುದಾಗಿ ಅಭಿಪ್ರಾಯ ಮಂಡಿಸಿದರು.

ಮುಂದುವರೆದು, ಗಿರಣಿಗಳಿಗೆ ಸರ್ಕಾರವು ಈ ಹಿಂದೆ ನೀಡಿದ ಮಂಜೂರಾತಿ ಮತ್ತು ಬಿಡುಗಡೆ ಆದೇಶಗಳ ಪ್ರತಿಗಳನ್ನು ಹಾಗೂ ಗಿರಣಿಯವರು ಸರ್ಕಾರಕ್ಕೆ ಏನಾದರೂ ಪಾವತಿಸಿದಲ್ಲಿ ಮರು ಪಾವತಿಸಿದ ರಶೀದಿ ಸಂಖ್ಯೆ /ಚಲನ್ ಸಂಖ್ಯೆ/ಓಚರ್ ಸಂಖ್ಯೆಗಳೊಂದಿಗೆ ಕಛೇರಿಗೆ ಹಾಜರಾಗಿ ತಮ್ಮ ಖಾತೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದ್ದು ಎಲ್ಲಾ 9 ಗಿರಣಿಗಳಿಗೆ ಪ್ರತ್ಯೇಕವಾಗಿ ದಿನಾಂಕ ಮತ್ತು ಸಮಯ ನಿಗದಿಗೊಳಿಸಿ ಖಾತೆಗಳ ಹೊಂದಾಣಿಕೆಗೆ ಅವಶ್ಯ ವ್ಯವಸ್ಥೆ ಮಾಡಲಾಗುವುದು ಎಂದು ಒಪ್ಪಿಗೆ ವ್ಯಕ್ತಪಡಿಸಿದರು. ಮುಂದುವರೆದು, ಸರ್ಕಾರವು ಈಗ ಹೊರಡಿಸಿರುವ ಆದೇಶವನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಅವಶ್ಯಕ ಅಂಶಗಳ ಕುರಿತು ಸಲಹೆಗಳನ್ನು ಕೆಲವೇ ದಿನಗಳಲ್ಲಿ ಲಿಖಿತವಾಗಿ ನೀಡುವುದಾಗಿ ಶ್ರೀ ವಿ.ಎಸ್. ಕಳಸೇಶ್ವರ, ಹಿರಿಯ ಲೆಕ್ಕಾಧಿಕಾರಿಗಳು, (ಸಾಲಗಳು) ಅಕೌಂಟೆಂಟ್ ಜನರಲ್ ಕಛೇರಿ ರವರು ಸಭೆಗೆ ಭರವಸೆ ನೀಡಿದರು.

3. ಶ್ರೀ ಬಿ.ಎಸ್. ಹರೀಶ್, ಸಹಕಾರ ಸಂಘಗಳ ಅಪರ ನಿಬಂಧಕರು, (ಕೈಗಾರಿಕೆ ಮತ್ತು ಹೈನುಗಾರಿಕೆ) ರವರು ಸರ್ಕಾರಿ ಆದೇಶದಲ್ಲಿ ಮಾರ್ಚ್ 2015ರ ಅಂತ್ಯಕ್ಕೆ ಇದ್ದಂತೆ ಬಡ್ಡಿ ಮನ್ನಾ ಮಾಡಿರುವ ಹಿನ್ನೆಲೆಯಲ್ಲಿ ಏಪ್ರಿಲ್ 2015 ರಿಂದ ಮಾರ್ಚ್ 2016 ರವರೆಗಿನ ಬಡ್ಡಿ ಕುರಿತಂತೆ ಇತ್ಯಾರ್ಥಗೊಳ್ಳಬೇಕಾಗುವ ಬಗ್ಗೆ ಸ್ಪಷ್ಟವಾಗಿ ನಮೂದಿಸಬೇಕಾದ ಅವಶ್ಯಕತೆ ಬಗ್ಗೆ ತಿಳಿಸಿದರು.

ಮಾರ್ಚ್ 2015ರ ಅಂತ್ಯಕ್ಕೆ ಇದ್ದಂತೆ ಸುಸ್ತಿ ಸಾಲ ಹಾಗೂ ಬಡ್ಡಿ, ದಂಡದ ಬಡ್ಡಿ ಕುರಿತು ಆದೇಶ ನೀಡಲಾಗಿದ್ದು, ಆದೇಶದ ದಿನಾಂಕದವರೆಗೆ ಬಡ್ಡಿ ಲೆಕ್ಕ ಮಾಡಿ ಬಹುಶಃ ಗಿರಣಿಗಳ ಖಾತೆಗೆ ಹೊರ ಬಾಕಿ ಎಂದು ನಮೂದಿಸಬೇಕಾಗಿರುತ್ತದೆ. ಈ ಕುರಿತು ಸ್ಪಷ್ಟವಾಗಿ ನಿರ್ದೇಶಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಈಗ ರಚಿಸುತ್ತಿರುವ ತಂಡಗಳು ಸದರಿ ಗಿರಣಿಯವರು ಆಯವ್ಯಯ ಘೋಷಣೆಯಂತೆ ಸಿದ್ಧಪಡಿಸಿ ಪ್ರಸ್ತಾವನೆಗೆ ಸಲ್ಲಿಸಿದ ಆಡಿಟ್ ಮಾಡಿದ ಅಂಕಿ-ಅಂಶಗಳನ್ನು ಆಧಾರವಾಗಿಟ್ಟುಕೊಂಡು, ಈಗ ಸರ್ಕಾರವು ಹೊರಡಿಸಿರುವ ಆದೇಶಕ್ಕೆ ಪೂರಕವಾಗಿ, ಪ್ರತಿಯೊಂದು ಸಹಕಾರಿ ನೂಲಿನ ಗಿರಣಿಗಳಿಗೆ ತಂಡವು ಖುದ್ದಾಗಿ ಭೇಟಿ ನೀಡಿ, ಸಾಲದ ಖಾತೆಗಳನ್ನು ಪರಿಶೀಲಿಸಿ, ದೃಢೀಕರಿಸಿ, ದಾಖಲೆಗಳೊಂದಿಗೆ ಸಲ್ಲಿಸಿದಲ್ಲಿ, ಮಹಾಲೇಖಪಾಲರ ಹಾಗೂ ಆಸ್ತಿ ಋಣ ನಿರ್ವಹಣ ಇಲಾಖೆಯಲ್ಲಿ 9 ಸಹಕಾರಿ ನೂಲಿನ ಗಿರಣಿಗಳ ಖಾತೆಗಳ ಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಸರ್ಕಾರಕ್ಕೆ ಅನುಪಾಲನ ವರದಿ ಸಲ್ಲಿಸಲು ಅನುಕೂಲವಾಗುತ್ತದೆ ಎಂದು ಸಭೆಗೆ ವಿವರಿಸಿದರು. ತಂಡವನ್ನು ರಚಿಸಿ, ದಿನಾಂಕವನ್ನು ನಿಗದಿಪಡಿಸಿ ಒಂದು ವಾರದೊಳಗೆ ವರದಿಯನ್ನು ಸಲ್ಲಿಸುವಂತೆ ತಿಳಿಸಬಹುದು ಎಂದು ಅಭಿಪ್ರಾಯಪಟ್ಟರು. ಮುಂದುವರೆದು, 9 ಸಹಕಾರಿ ನೂಲಿನ ಗಿರಣಿಗಳಿಗೆ ಪ್ರತ್ಯೇಕ ಆದೇಶವನ್ನು ನೀಡುವಾಗ ಗಿರಣಿಗಳೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆಗೆ ಬೇಕಾದ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ವಿಧಿಸುವಂತೆ ಸಭೆಗೆ ಸೂಚಿಸಿದರು.

4. ಶ್ರೀಮತಿ ಹೆಚ್.ಆರ್.ಅರುಣ ಕುಮಾರಿ, ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆರವರು ಸರ್ಕಾರವು ನೀಡಿರುವ ಆದೇಶದಲ್ಲಿ ಸ್ಪಷ್ಟವಾಗಿ, ಲೆಕ್ಕ ಹೊಂದಾಣಿಕೆ ಮಾಡುವ ಲೆಕ್ಕ ಶೀರ್ಷಿಕೆಗಳನ್ನು ನಮೂದಿಸಬೇಕಾಗುತ್ತದೆ. ಆದ್ದರಿಂದ, ಸರ್ಕಾರಿ ಆದೇಶವು ಇನ್ನು ಸ್ಪಷ್ಟವಾಗಿ ಪರಿಷ್ಕೃತವಾಗಿ ನೀಡುವುದು ಅವಶ್ಯವಿರುತ್ತದೆ ಎಂಬ ಅಭಿಪ್ರಾಯಪಟ್ಟರು. ಸರ್ಕಾರದ ಆದೇಶದಲ್ಲಿನ ಅಂಕಿ-ಅಂಶಗಳು ದಿನಾಂಕ: 31.03.2015ರ ಅಂತ್ಯದವರೆಗಿನದನ್ನು ಮಾತ್ರವೇ ಈ ಯೋಜನೆಯಲ್ಲಿ ಪರಿಗಣಿಸಿದ್ದು, ದಿನಾಂಕ: 01.04.2015 ರಿಂದ ಈ ಆದೇಶ ಹೊರಡಿಸುವವರೆಗಿನ ದಿನದವರೆಗಿನ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಅದನ್ನು ಸಂಬಂದಿಸಿದ ಸಹಕಾರಿ ನೂಲಿನ ಗಿರಣಿಗಳಿಂದ ವಸೂಲಿ ಮಾಡಿ ಸರ್ಕಾರಕ್ಕೆ ಪಾವತಿಸಲು ಕ್ರಮವಿಡಬೇಕಾಗುತ್ತದೆ. ಹಾಗೇ ಮಾಡಿದಲ್ಲಿ ಮಾತ್ರವೇ 'ಲೆಕ್ಕಚಾರದ ತತ್ವನೀತಿಯನ್ವಯ (Accounting Principles ) ಕ್ರಮವಿಟ್ಟು ಗಿರಣಿಯ ಖಾತೆಗಳನ್ನು ಸರಿಯಾದ ರೀತಿಯಲ್ಲಿ ಹೊಂದಾಣಿಕೆ ಮಾಡಬಹುದಾಗಿದೆ ಎಂದು ಸಭೆಗೆ ತಿಳಿಸಿದರು. ದಿನಾಂಕ: 01.04.2015 ರಿಂದ ಇಲ್ಲಿಯವರೆಗಿನ ಬಡ್ಡಿ ಲೆಕ್ಕಚಾರ ಮಾಡಿ ಗಿರಣಿಗಳಿಂದ ಸರ್ಕಾರಕ್ಕೆ ಪಾವತಿಸುವ ಕುರಿತು ಆದೇಶದಲ್ಲಿ ಯಾವುದೇ ಅಂತಿಮ ನಿಗದಿತ ದಿನದ ಉಲ್ಲೇಖವಿರುವುದಿಲ್ಲ, ಅದರ ಕುರಿತು ಸರ್ಕಾರದಿಂದ ಮಾರ್ಗದರ್ಶನ ಕೋರಲು ಸಭೆಗೆ ತಿಳಿಸಿದರು.

5. ಶ್ರೀ ಜಬ್ಬಾರ್ ಬೇಗ್, ಸಹಕಾರ ಸಂಘಗಳ ಜಂಟಿ ನಿಬಂಧಕರವರು (ಜವಳಿ) ರವರು ಎಲ್ಲಾ 9 ಸಹಕಾರಿ ನೂಲಿನ ಗಿರಣಿಗಳು ಬೆಳಗಾವಿ ಪ್ರಾಂತ್ಯದ ಕಾರ್ಯವ್ಯಾಪ್ತಿಗೆ ಒಳಪಡುತ್ತಿದ್ದು, ಅವುಗಳಿಂದ ದಿನಾಂಕ: 31.03.2015ರವರೆಗಿನ ಆಡಿಟ್ ಮಾಡಿದ ಅಂಕಿ-ಅಂಶಗಳನ್ನು ಪಡೆದು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅದರಂತೆ, ಸಕಾರವು ಆದೇಶದ ಮೂಲಕ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಈ ಎಲ್ಲಾ 9 ಸಹಕಾರಿ ನೂಲಿನ ಗಿರಣಿಗಳು ನೀಡಿರುವ ಅಂಕಿ-ಅಂಶಗಳ ಲೆಕ್ಕ ಹೊಂದಾಣಿಕೆ ಕುರಿತು ಸಂಬಂಧಪಟ್ಟ ಜಿಲ್ಲೆಗಳ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಉಪ ನಿಬಂಧಕರು, ಸಹಕಾರ ಇಲಾಖೆ ಹಾಗೂ ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ

ಪರಿಶೋಧನಾ ಇಲಾಖೆ. ಈ ಮೂವರು ಅಧಿಕಾರಿಗಳನ್ನೊಳಗೊಂಡ ಜಿಲ್ಲಾವಾರು ತಂಡಗಳನ್ನು ರಚಿಸಿ, ತಂಡಗಳ ಮೂಲಕ ವರದಿಗಳನ್ನು ಪಡೆದು ಗಿರಣಿಯ ಲೆಕ್ಕ ಹೊಂದಾಣಿಕೆ ಪ್ರಕ್ರಿಯೆ ಕೈಗೊಳ್ಳಬಹುದಾಗಿದೆ ಎಂದು ಸಭೆಗೆ ತಿಳಿಸಿದ್ದು, ಅದನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಸಮ್ಮತಿಸಿದರು.

6. ಶ್ರೀ ಸಂಗಮಾದ್ ಹೆಚ್.ಆರ್, ಉಪ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸ.ಅಪೆಕ್ಸ್ ಬ್ಯಾಂಕ್ ನಿ., ರವರು ಮೂರು ಸಹಕಾರಿ ನೂಲಿನ ಗಿರಣಿಗಳಿಗೆ ಸಂಬಂಧಿಸಿದಂತೆ ಕೇವಲ ಸಾಲದ ಬಾಕಿ ಅಸಲು ಮಾತ್ರ ಬ್ಯಾಂಕಿಗೆ ಪಾವತಿಸಲು ಸರ್ಕಾರ ಒಪ್ಪಿದ್ದು, ಬಡ್ಡಿ ಕುರಿತು ಯಾವುದೇ ದಾಖಲಿಸಿರುವುದಿಲ್ಲ. ದಯವಿಟ್ಟು ಸಾರ್ವಜನಿಕರ ಹಣದಿಂದ ನೀಡಿದ ಸಾಲವನ್ನು ಮರುಪಾವತಿಸಲು ಕ್ರಮವಿಡುವಂತೆ ಕೋರಿದಾಗ, ಶ್ರೀ ಜಬ್ಬಾರ್ ಬೇಗ್, ಸ.ಸಂ.ಜಂಟಿ ನಿಬಂಧಕರು (ಜವಳಿ), ಸದರಿ ವಿಷಯವು ಸರ್ಕಾರದ ಹಂತದಲ್ಲಿ ತೀರ್ಮಾನಿಸಿ ಆದೇಶಿಸಲಾಗಿರುವುದರಿಂದ ಇದರ ಕುರಿತು ಈ ಸಭೆಯಲ್ಲಿ ಚರ್ಚಿಸುವುದು ಸೂಕ್ತವಾಗಿರುವುದಿಲ್ಲ. ಒಂದು ವೇಳೆ ಬ್ಯಾಂಕಿನಿಂದ ಈ ಕುರಿತು ಲಿಖಿತ ಮನವಿ ಸಲ್ಲಿಸಿದಲ್ಲಿ, ಸರ್ಕಾರಕ್ಕೆ ವರದಿಸಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಮ್ಮತಿಸಿದ ಶ್ರೀ ಬಿ.ಎಸ್.ಹರೀಶ್, ಸ.ಸಂ. ಅಪರ ನಿಬಂಧಕರು, (ಕೈ ಮತ್ತು ಹೈ) ರವರು ಮೊದಲು ಸರ್ಕಾರವು ಆಯವ್ಯಯದಲ್ಲಿ ಅವಕಾಶ ಕಲ್ಪಿಸಿ ಆದೇಶಿಸಬೇಕಾಗಿರುವುದರಿಂದ, ನಂತರ ಈ ಕುರಿತು ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು. ಇದಕ್ಕೆ ಹಾಜರಿದ್ದ ಎಲ್ಲಾ ಅಧಿಕಾರಿಗಳು ಸಮ್ಮತಿಸಿದರು.

7. ಸುದೀರ್ಘ ಚರ್ಚೆಯ ನಂತರ ಸಭೆಯ ಅಧ್ಯಕ್ಷರಾದ ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರು, ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಕೆಳಕಂಡ ಅಂಶಗಳನ್ನು ನಿಗದಿಪಡಿಸಿದರು.

(ಅ) ಮಹಾಲೇಖಪಾಲರ ಇಲಾಖಾ ಅಧಿಕಾರಿಗಳು ಹಾಗೂ ಸಹಕಾರಿ ಲೆಕ್ಕ ಪರಿಶೋಧನೆ ಇಲಾಖಾ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುವಂತೆ ಲೆಕ್ಕ ಹೊಂದಾಣಿಕೆಗೆ ಅನುಕೂಲವಾಗುವಂತೆ ಲೆಕ್ಕ ಶೀರ್ಷಿಕೆಗಳೊಂದಿಗೆ ಗಿರಣಿವಾರು ಪ್ರತ್ಯೇಕ ಆದೇಶ ನೀಡಲು ಸರ್ಕಾರಕ್ಕೆ ಕೋರುವುದು.

(ಆ) ಸದರಿ 9 ಗಿರಣಿಗಳಲ್ಲಿ ಲೆಕ್ಕ ಪುಸ್ತಕಗಳ ಪರಿಶೀಲನೆ ಹಾಗೂ ಅವಶ್ಯ ದಾಖಲಾತಿಗಳನ್ನು ಪಡೆಯಲು ಸಹಕಾರ, ಜವಳಿ ಹಾಗೂ ಲೆಕ್ಕ ಪರಿಶೋಧನೆ ಇಲಾಖಾಧಿಕಾರಿಗಳ ಜಿಲ್ಲಾವಾರು ತಂಡಗಳನ್ನು ರಚಿಸುವುದು.

(ಇ) ಸದರಿ ತಂಡಗಳು ಗಿರಣಿಗಳಿಗೆ ಭೇಟಿ ನೀಡಿ ಸರ್ಕಾರದ ಆದೇಶದನ್ವಯ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿ, ನಿಗದಿಪಡಿಸಲಾದ ಷರತ್ತುಗಳಂತೆ ದಾಖಲಾತಿಗಳನ್ನು ಪಡೆದು ಎರಡು ವಾರಗಳಲ್ಲಿ ಈ ಕಛೇರಿಗೆ ವರದಿ ಸಲ್ಲಿಸುವುದು.

(ಈ) ಸಾಲದ ಖಾತೆಗಳಿಗೆ ಸಂಬಂಧಪಟ್ಟ ಸರ್ಕಾರಿ ಆದೇಶಗಳು, ಸಾಲ ಮರುಪಾವತಿಗೆ ಸಂಬಂಧಪಟ್ಟ ರಶೀದಿಗಳು ಹಾಗೂ ಇತರೆ ಅವಶ್ಯ ದಾಖಲಾತಿಗಳೊಂದಿಗೆ ಮಹಾಲೇಖಪಾಲರ ಕಛೇರಿಗೆ ಸಂಪರ್ಕಿಸಿ, ಲೆಕ್ಕ ಪುಸ್ತಕಗಳು ಸರಿಪಡಿಸಿಕೊಳ್ಳಲು ಎಲ್ಲ ಗಿರಣಿಗಳಿಗೆ ಸೂಚಿಸುವುದು.

(ಉ) ಎಲ್ಲಾ 9 ಗಿರಣಿಗಳಿಂದ ಆಡಳಿತ ಮಂಡಳಿಯ ಠರಾವು ಹಾಗೂ ಮುಚ್ಚಳಿಕೆ ಪತ್ರಗಳೊಂದಿಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ನಮೂದಿಸಿ ಒಪ್ಪಿಗೆ ಪತ್ರಗಳು ಪಡೆಯುವುದು.

(i) ಎಲ್ಲಾ ಗಿರಣಿಗಳ ಆಡಳಿತ ಮಂಡಳಿಗಳು ಸರ್ಕಾರದೊಂದಿಗೆ Memorandum of Understanding (MOU) ಮಾಡಿಕೊಳ್ಳುವುದು ಹಾಗೂ ಈ ಕುರಿತು ಆಡಳಿತ ಮಂಡಳಿ ಹಾಗೂ ಸಾಮಾನ್ಯ ಸಭೆಗಳ ಒಪ್ಪಿಗೆ ಪಡೆಯುವುದು.

(ii) ಸರ್ಕಾರದ ಆದೇಶದಂತೆ ಗಿರಣಿಗಳಲ್ಲಿ ಸರ್ಕಾರದ ಒಟ್ಟು ಷೇರು ಹೂಡಿಕೆಗೆ ಅನುಗುಣವಾಗಿ ಷೇರು ಸರ್ಟಿಫಿಕೇಟುಗಳನ್ನು ನೀಡುವುದು.

(iii) ಸದರಿ ೨ ಸಹಕಾರಿ ನೂಲಿನ ಗಿರಣಿಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಕೊಡಬಹುದಾದ ಏಕಕಾಲಿಕ ಹಾಗೂ ಅಂತಿಮ ಅವಕಾಶ. ಇನ್ನು ಮುಂದೆ ಸರ್ಕಾರದಿಂದ ಯಾವುದೇ ಹಣಕಾಸಿನ ನೆರವು ನೀಡಲಾಗುವುದಿಲ್ಲ.

(iv) ಸದರಿ ೨ ಸಹಕಾರಿ ನೂಲಿನ ಗಿರಣಿಗಳ ಸರ್ಕಾರದ ಸಾಲಗಳು ಷೇರಾಗಿ ಪರಿವರ್ತನೆಯಾದ ನಂತರ, ಸದರಿ ಗಿರಣಿಗಳಲ್ಲಿ ಸರ್ಕಾರದ ಷೇರು ಶೇ.೨೦%ಕ್ಕಿಂತ ಮೀರದಂತೆ ಗಿರಣಿಯವರು ಸದಸ್ಯರಿಂದ ಷೇರು ಹಣ ಸಂಗ್ರಹಿಸಲು ಬದ್ಧರಾಗಿರಬೇಕು. ವಿಫಲಗೊಂಡಲ್ಲಿ ಗಿರಣಿಗಳನ್ನು ಸರ್ಕಾರದ ಸುಪರ್ಧಿಗೆ ತೆಗೆದುಕೊಂಡು ಸೂಕ್ತ ಪರ್ಯಾಯ ಕ್ರಮವಿಡಲಾಗುವುದು.

(v) ಗಿರಣಿಗಳನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗಲು ಕ್ರಮಕೈಗೊಳ್ಳತಕ್ಕದ್ದು.

(vi) ಗಿರಣಿಗಳಿಂದ ಮುಂದಿನ ಕ್ರಿಯಾ ಯೋಜನೆ ಹೊಂದಿ ಅವುಗಳನ್ನು ಅಳವಡಿಸಿಕೊಳ್ಳುವ ಕುರಿತು ಕ್ರಮವಿಡತಕ್ಕದ್ದು.

(i) ಗಿರಣಿಯ ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರತಿನಿಧಿ ಮತ್ತು ಸರ್ಕಾರಿ ಅಧಿಕಾರಿಗಳ ಉಪಸ್ಥಿತಿಗೆ ಬದ್ಧರಾಗಿರುವ ಕುರಿತು ಮುಚ್ಚಳಿಕೆ ನೀಡುವುದು.

ಈ ಮೇಲ್ಕಂಡ ಅಂಶಗಳನ್ನು ಅಳವಡಿಸಿ ಎಲ್ಲಾ ೨ ಗಿರಣಿಗಳಿಗೆ ಗಿರಣಿವಾರು ಪ್ರತ್ಯೇಕ ಆದೇಶ ನೀಡಲು ಸರ್ಕಾರಕ್ಕೆ ವಿನಂತಿಸಲು ಸೂಚಿಸಲಾಯಿತು. ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ|| ಆರ್. ರಾಜು)
ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು – 560 001.